# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:09/03/2016

ಪ್ರಕರಣ ಸಂಖ್ಯೆ: ಆರ್‌ಎ 32/2014-15

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಮರಿಯಮ್ಮ<br>ಕೋಂ ವೆಂಕಟೇಶಪ್ಪ<br>2. ಗೋಪಾಲಪ್ಪ<br>ಬಿನ್ ವೆಂಕಟೇಶಪ್ಪ<br>3. ನಾರಾಯಣಮ್ಮ<br>ಬಿನ್ ವೆಂಕಟೇಶಪ್ಪ<br>-ಎಲ್ಲರೂ ವಾಸ<br>ನಂಬಿಗಾನಹಳ್ಳಿ ಗ್ರಾಮ<br>ಕಸಬಾ ಹೋಬಳಿ<br>ಮಾಲೂರು ತಾಲ್ಲೂಕು<br>(ಶ್ರೀ ಎಸ್.ಸಿ.ವೆಂಕಟಾಚಲಪತಿ<br>- ವಕೀಲರು, ರವರಿಂದ ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ಚನ್ನಪ್ಪ<br>ಬಿನ್ ಮುನಿವೆಂಕಟಪ್ಪ<br>3. ಗೋಪಾಲಪ್ಪ<br>ಬಿನ್ ಮುನಿವೆಂಕಟಪ್ಪ<br>-ಕ್ರಸಂ 2 ಮತ್ತು 3 ವಾಸ<br>ಭುವನವನಹಳ್ಳಿ ಗ್ರಾಮ<br>ಕಸಬಾ ಹೋಬಳಿ<br>ಮಾಲೂರು ತಾಲ್ಲೂಕು<br>(ಶ್ರೀ ಬಿ.ಆರ್ ರವೀಂದ್ರ<br>- ವಕೀಲರು, ರವರಿಂದ ) |

ವಿಷಯ: ಸಹಾಯಕ ಕಮೀಷನರ್, ಕೋಲಾರ ಉಪ ವಿಭಾಗ ರವರ ನಂ.ಆರ್.ಎ. 264/2011-12 ದಿನಾಂಕ:26/07/2014 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 50 ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಮಾಲೂರು ತಾಲ್ಲೂಕು ಕಸಬಾ ಹೋಬಳಿ ಕಾಡುಸೊಣ್ಣಹಳ್ಳಿ ಗ್ರಾಮದಸ.ನಂ. 11/5 ರ ಫಹಣಿ ಪತ್ರಿಕೆ ತಿದ್ದುಪಡಿ ಮಾಡಲು ಭುವನಹಳ್ಳಿ ಗ್ರಾಮದ ಚನ್ನಪ್ಪ ಬಿನ್ ಮುನಿವೆಂಕಟಪ್ಪ ರವರು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಜ್ಞಾಪನದಂತೆ ಈ ಜಮೀನಿನ ಹಕ್ಕು ಬದಲಾವಣೆ ಆಗಿರುವುದರಿಂದ ಸದರಿ ಹಕ್ಕು ಬದಲಾವಣೆ ಮಾಡುವುದು ಅಥವಾ ರದ್ದುಪಡಿಸುವುದು ತಿದ್ದುಪಡಿ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿಕೊಳ್ಳುವಂತೆ ಅರ್ಜಿದಾರರಿಗೆ ತಹಶೀಲ್ದಾರ್, ರವರು ಕ್ರಮಾಂಕ:ಆರ್‌ಆರ್‌ಟಿ(ಕ) 425/10-11 ರಲ್ಲಿ ದಿನಾಂಕ:18/12/2010 ರಂದು ಹಿಂಬರಹ ನೀಡಿರುತ್ತಾರೆ. ಈ ಹಿಂಬರಹ ಕ್ರಮಬದ್ಧತೆಯನ್ನು ಪ್ರಶ್ನಿಸಿ ಸದರಿ ಚನ್ನಪ್ಪ ಮತ್ತು ಅವರ ಸಹೋದರ ಗೋಪಾಲಪ್ಪ ರವರುಗಳು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ: ಆರ್‌ಎ.264/2011-12 ರಲ್ಲಿ ದಿನಾಂಕ:26/07/2014 ರಂದು ಹೊರಡಿಸಿದ ಆದೇಶದಲ್ಲಿ

...2

ಮೇಲ್ಮನವಿಯನ್ನು ಪುರಸ್ಕರಿಸಿರುತ್ತಾರೆ. ಕಾಡುಸೊಣ್ಣಹಳ್ಳಿ ಗ್ರಾಮದ ಸ.ನಂ. 11/5 ರ ಫಹಣಿ ಪತ್ರಿಕೆಯಲ್ಲಿ ಅನಧೀಕೃತವಾಗಿ ಮುಂದುವರಿದಿರುವ ಎಲ್.ಚೌಡಪ್ಪ ಬಿನ್ ಲಕ್ಷ್ಮಯ್ಯ ರವರ ಹೆಸರು ಮತ್ತು ಎಂ.ಆರ್ 1/69-70 ನಮೂದನ್ನು ರದ್ದುಪಡಿಸಿರುತ್ತಾರೆ. ಸದರಿ ಜಮೀನಿನ ಖಾತೆಯನ್ನು ಮೂಲಖಾತೇದಾರ ಮುನಿವೆಂಕಟಪ್ಪ ರವರ ಹೆಸರಿಗೆ ಪುನರ್‌ಸ್ಥಾಪಿಸಲು ತಹಶೀಲ್ದಾರ್ ರವರಿಗೆ ನಿರ್ದೇಸಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಲಾಯ್ತು.

ದಿನಾಂಕ:29/10/2014 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಮೇಲ್ಮನವಿದಾರರ ವಕೀಲರು ತಮ್ಮ ಲಿಖಿತವಾದವನ್ನು ಮಂಡಿಸಿದರು. ಪ್ರತಿವಾದಿಗೆ ಕಾಲಾವಕಾಶ ನೀಡಿ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು. ಹಿಂದಿನ ಪೀಠಾಧಿಕಾರಿಗಳು ಆದೇಶ ಹೊರಡಿಸದ ಕಾರಣ ಪ್ರಕರಣವನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳಲಾಯ್ತು. ದಿನಾಂಕ:11/02/2015 ರಂದು ಎದುರುದಾರರ ವಕೀಲರು ಲಿಖಿತವಾದ ಮಂಡಿಸಿದ ಹಿನ್ನೆಲೆಯಲ್ಲಿ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಗಿತ್ತು.

ಮೇಲ್ಮನವಿದಾರರ ಪರವಾಗಿ ಮಂಡಿಸಲಾದ ವಾದದಲ್ಲಿ ಮಾಲೂರು ತಾಲ್ಲೂಕು ಕಸಬಾ ಹೋಬಳಿ ಕಾಡುಸೊಣ್ಣಹಳ್ಳಿ ಗ್ರಾಮದ ಸ.ನಂ. 11/5 ರಲ್ಲಿನ 3 ಎಕರೆ 02 ಗುಂ<ಟೆ ಜಮೀನು ಮೊದಲಿಗೆ ಮೇಲ್ಮನವಿದಾರರ ತಂದೆ ಮುನಿವೆಂಕಟಪ್ಪ ಬಿನ್ ಚನ್ನಪ್ಪ ರವರಿಗೆ ಸೇರಿದ್ದು ಅವರು ಜೀವಂತರಾಗಿದ್ದಾಗ ಸದರಿ ಜಮೀನಿನ ಸ್ವಾಧೀನಾನುಭವ ಹೊಂದಿದ್ದರೆಂದು ತಿಳಿಸಿರುತ್ತಾರೆ. ನಂತರ ಸದರಿ ಮುನಿವೆಂಕಟಪ್ಪ ಅವರ ಮಗ ಚನ್ನಪ್ಪ ಹಾಗೂ ಲಕ್ಷ್ಮಮ್ಮ ರವರು ಸದರಿ ಜಮೀನನ್ನು ರೂ 400/- ಬೆಲೆಗೆ ಎಲ್.ಚಂದ್ರಪ್ಪ ಬಿನ್ ಲಕ್ಷ್ಮಯ್ಯ, ಅಂಗೊಂಡಹಳ್ಳಿ ರವರಿಗೆ ನೋಂದಾಯಿತ ದಸ್ತಾವೇಜು ಕ್ರಮಾಂಕ: 2876/69-70 ದಿನಾಂಕ:27/02/1970 ರಂತೆ ಮಾರಾಟ ಮಾಡಿದ್ದು ಕ್ರಯದಾರರ ಹೆಸರಿಗೆ ಎಂಆರ್ 01/69-70 ರಂತೆ ಖಾತೆ ಬದಲಾವಣೆ ಆಗಿ ಮ್ಯುಟೇಶನ್ ಅಂಗೀಕರಿಸಲ್ಪಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ಶ್ರೀ ಎಲ್.ಚೌಡಪ್ಪ ಬಿನ್ ಎಲ್.ಲಕ್ಷ್ಮಯ್ಯ ರವರು ತಾನು ಕ್ರಯಕ್ಕೆ ಪಡೆದಿದ್ದ ಕಾಡುಸೊಣ್ಣಹಳ್ಳಿ ಗ್ರಾಮದ ಸ.ನಂ. 11/5 ರಲ್ಲಿನ 3 ಎಕರೆ 02 ಗುಂಟೆ ಜಮೀನನ್ನು ನಂಬಿಗಾನಹಳ್ಳಿ ಗ್ರಾಮದ ವೆಂಕಟೇಶಪ್ಪ ಬಿನ್ ಮುನಿವೆಂಕಟಪ್ಪ ರವರಿಗೆ ರೂ 400/- ಬೆಲೆಗೆ ನೋಂದಾಯಿತ ದಸ್ತಾವೇಜು ಕ್ರಮಾಂಕ: 1431/70-71 ದಿನಾಂಕ:21/08/1970 ರಂತೆ ಮಾರಾಟ ಮಾಡಿರುತ್ತಾರೆಂದು ಕ್ರಯವಹಿವಾಟಿನ ವಿವರ ನೀಡಿರುತ್ತಾರೆ. ಸದರಿ ವೆಂಕಟೇಶಪ್ಪ ರವರು 1ನೇ ಮೇಲ್ಮನವಿದಾರರ ಗಂಡ ಹಾಗೂ 2 ಮತ್ತು 3ನೇ ಮೇಲ್ಮನವಿದಾರರ ತಂದೆ ಎಂದು ನಿವೇದಿಸಿರುತ್ತಾರೆ. ಅಂದಿನಿಂದ ಸದರಿ ಜಮೀನು ಕ್ರಯದಾರರಾದ ವೆಂಕಟೇಶಪ್ಪ ರವರ ಸ್ವಾಧೀನಾನುಭವದಲ್ಲಿದ್ದು ಅವರ ನಂತರ ಮೇಲ್ಮನವಿದಾರರು ಸ್ವಾಧೀನಾನುಭವದಲ್ಲಿರುವುದಾಗಿ ವಾದಿಸಿರುತ್ತಾರೆ. ಈ ಜಮೀನಿನ ಬಗ್ಗೆ ಶಾಮಣ್ಣ ಬಿನ್ ರಾಮಯ್ಯ ರವರು ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದ ಮೂಲದಾವೆ ಓ.ಎಸ್ 221/2008 ವಜಾ ಆಗಿರುವುದಾಗಿ ತಿಳಿಸಿ. ವೆಂಕಟೇಶಪ್ಪ ರವರು ಅವಿದ್ಯಾವಂತರಾಗಿದ್ದ ಕಾರಣ ಮೇಲ್ಕಂಡ ಜಮೀನಿನ ಖಾತೆಯನ್ನು ಕ್ರಯಪತ್ರದಂತೆ ಅವರ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲಿಲ್ಲವೆಂದು ಆದರೂ ಸದರಿ ಜಮೀನು ತಹಲ್‌ವರೆಗೆ ಮೇಲ್ಮನವಿದಾರರ ಸ್ವಾಧೀನಾನುಭವದಲ್ಲಿರುವುದಾಗಿ ತಿಳಿಸಿರುತ್ತಾರೆ. ತಾವು ಸದರಿ ಜಮೀನನ್ನು ವಿಭಾಗ ಮಾಡಿಕೊಂಡಿದ್ದು ಅದರಂತೆ ತಮ್ಮಗಳ ಹೆಸರಿಗೆ ಖಾತೆ ಆಗಿರುವುದೆಂದು ತಿಳಿಸಿ ದಾವಾಸ್ವತ್ತಿಗೂ ಎದುರುದಾರರಿಗೂ ಯಾವುದೇ ಸಂಬಂಧ ಇಲ್ಲವೆಂದು ನಿವೇದಿಸಿ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸುವ ಮೂಲಕ 1ನೇ ಎದುರುದಾರರು ಹೊರಡಿಸಿರುವ ಪ್ರಶ್ನಿತ ಆದೇಶವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

2 ಮತ್ತು 3ನೇ ಎದುರುದಾರರುಗಳ ಪರವಾಗಿ ಮಂಡಿಸಲಾದ ವಾದದಲ್ಲಿ ಕಾಡುಸೊಣ್ಣಹಳ್ಳಿ ಗ್ರಾಮದ ಸ.ನಂ. 11/5 ರಲ್ಲಿನ 3 ಎಕರೆ 04 ಗುಂಟೆ ಜಮೀನುಗಳು 2 ಮತ್ತು 3ನೇ ಎದುರುದಾರರ ತಂದೆ ಮುನಿವೆಂಕಟಪ್ಪ ಬಿನ್ ಚನ್ನಪ್ಪ ಮತ್ತು ಅವರ ಪತ್ನಿ ಬೈಯಮ್ಮ ರವರಿಗೆ ಸೇರಿದ್ದು ಅವುಗಳು ಸದರಿಯವರಿಗೆ ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳು ಪ್ರಕರಣ ಸಂಖ್ಯೆ:929/59-60 ರಲ್ಲಿ ಮಂಜೂರು ಆಗಿರುವುದಾಗಿ ತಿಳಿಸಿರುತ್ತಾರೆ. ತಮ್ಮ ತಂದೆ ಜೀವಂತರಾಗಿದ್ದಾಗ ಸ.ನಂ. 5 ರ ಜಮೀನನ್ನು ಎಲ್.ಚೌಡಪ್ಪ ಬಿನ್ ಲಕ್ಷ್ಮಯ್ಯ ರವರಿಗೆ ನೋಂದಾಯಿತ ದಸ್ತಾವೇಜು ಕ್ರಮಾಂಕ:2876/69-70 ದಿನಾಂಕ:27/02/1970 ರಂತೆ ಮಾರಾಟ ಮಾಡಿದರೆಂದು ತಿಳಿಸಿರುತ್ತಾರೆ. ಆದರೆ ಕ್ರಯಪತ್ರದಲ್ಲಿ

...3